PW-2
CW-4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.244/2022**

| | | |
|---|---|---|
| ಸಾಕ್ಷಿದಾರರ ಹೆಸರು | : | ಚರಣ್ ಸಿಂಗ್ ಠಾಕೂರ್ |
| ತಂದೆಯ/ಗಂಡನ ಹೆಸರು | : | ಸುಭಾಷ್ ಚಂದ್ರ ಠಾಕೂರ್ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಕಂದಾಯ ನಿರೀಕ್ಷಕರು, ಮಾನ್ವಿ, ಮಾನ್ವಿ ತಾಲ್ಲೂಕು ರಾಯಚೂರು ಜಿಲ್ಲೆ |
| ವಾಸ ಸ್ಥಳ | : | ಮಾನ್ವಿ ರಾಯಚೂರು ಜಿಲ್ಲೆ |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 4

ದಿ: 14-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ಮಾನ್ವಿ ಯಲ್ಲಿ ಕಂದಾಯ ನಿರೀಕ್ಷಕನಾಗಿ ದಿನಾಂಕ 30-10-2019 ರಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕಃ 22-03-2021 ರಂದು ಮಾನ್ವಿ ತಹಶೀಲ್ದಾರರು ನನಗೆ ಕರೆ ಮಾಡಿ ಮಾನ್ವಿ ಪೋಲೀಸ್ ಠಾಣೆಯಲ್ಲಿ ಮಹಜರ್ ಗೆ ನನಗೆ ಮತುತ ಚಾಸಾ-5 ರವರಿಗೆ ಹಾಜರಾಗುವಂತೆ ಹೇಳಿದರೆ. ಅದೇ ರೀತಿ ನಾನು ಮತ್ತು ಚಾಸಾ-5 ರವರು ಪೋಲೀಸ್ ಠಾಣೆ ಗೆ ಹಾಜರಾದೆವು. ಅಲ್ಲಿ ಚಾಸಾ- 24 ಹಾಗೂ ಚಾಸಾ-1 ರವರು ಅಲ್ಲಿ ಹಾಜರಿದ್ದರು. ಚಾಸಾ-1 ರವರು ನಮಗೆ ಮಾನ್ವಿ ಗ್ರಾಮದ ಸ್ಪೋಟಕ ವಸ್ತುಗಳ ಬಗ್ಗೆ ಮಹಜರ್ ಕುರಿತು ನನಗೆ ಹಾಜರಾಗಲು ತಿಳಿಸಿದರು. ಅಲ್ಲಿ ಡಿ ವೈ ಎಸ್ ಪಿ ಮತ್ತು ಚಾಸಾ- 13, ಚಾಸಾ-14, ಚಾಸಾ-16 ಮತ್ತು ಚಾಸಾ-17, ಚಾಸಾ-18 ಮತ್ತು ಚಾಸಾ- 19

PW-2
CW-4

ಮತ್ತು ಠಾಣೆಯಲ್ಲಿ ಸೈಯದ್ ಮುಜಾಹಿದೀನ್ ಸಿದ್ದಿಕಿ ಎಂಬುವವರು ಇದ್ದರು. (ಸದರಿಯವರು ಗೈರು ಹಾಜರು ಇರುವ ಆರೋಪಿಯನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಅಂತ ನುಡಿದಿರುತ್ತಾರೆ.) ತಂಡದೊಂದಿಗೆ ನಾವು ಅಲ್ಲಿಂದ ಮಾನ್ವಿಯ ಆರ್ ಜಿ ಕ್ಯಾಂಪ್ ನ ಸರ್ವೆ ನಂಬರ್ 335 ಕ್ಕೆ ಹೋದೆವು. ಅಲ್ಲಿ ಹೋದಾಗ ಸೈಯದ್ ಮುಜಾಹಿದೀನ್ ಸಿದ್ದಿಕಿ ರವರು ಸ್ಫೋಟಕಗಳನ್ನು ಇಟ್ಟಿರುವ ಬಗ್ಗೆ ತಿಳಿಸಿದರು. ಸದರಿ ಸ್ಥಳಕ್ಕೆ ಸೈಯದ್ ಮುಜಾಹಿದೀನ್ ಸಿದ್ದಿಕಿ ಆರೋಪಿಯೇ ನಮ್ಮನ್ನು ಕರೆದುಕೊಂಡು ಹೋದರು. ಆ ಜಾಗದಲ್ಲಿ ಸ್ಫೋಟಕ ವಸ್ತುಗಳು ಇದ್ದು, ಅವು ಜಿಲೇಟಿನ್ ಸ್ಟಿಕ್, 50 ಡಬ್ಬಿಗಳು, 15 ಚೀಲ ಅಮೋನಿಯಂ ನೈಟ್ರೇಟ್ ಪೌಡರ್, 6 ಡಬ್ಬಿ ಎಲೆಕ್ಟ್ರಿಕಲ್ ಡಿಲೋ ಸೆಂಟರ್ ಅಲ್ಲಿ ಇತ್ತು. ಇವುಗಳನ್ನು ಜಪ್ತು ಮಾಡಿ ಮದ್ಯಾಹ್ನ 12-30 ರಿಂದ 2-30 ರ ವರಗೆ ಮಹಜರ್ ಮಾಡಿದರು. ಸದರಿ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.- 4 ಎಂದು ನನ್ನ ಸಹಿಯನ್ನು ನಿ.ಪಿ.- 4(ಎ) ಎಂದು ಗುರುತಿಸಲಾಯಿತು. ಮಹಜರ್ ಗೆ ಹೋಗಲು ನನಗೆ ಒಂದು ನೋಟೀಸ್ ಕೊಟ್ಟರು, ಈಗ ಆ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.- 5 ಎಂದು, ನನ್ನ ಸಹಿಯನ್ನು ನಿ.ಪಿ.- 5(ಎ) ಎಂದು ಗುರುತಿಸಲಾಯಿತು.

2. ಸದರಿ ಸ್ಫೋಟಕ ವಸ್ತುಗಳ ಬಗ್ಗೆ ವಿಚಾರಿಸಿದಾಗ ಸೈಯದ್ ಮುಜಾಹಿದೀನ್ ಸಿದ್ದಿಕಿ ರವರು 1 ನೇ ಆರೋಪಿಗೆ ಮಾರಾಟ ಮಾಡಿರುವುದಾಗಿ ಹೇಳಿದರು. ಸದರಿ ಸೈಯದ್ ಮುಜಾಹಿದೀನ್ ಸಿದ್ದಿಕಿ ನೋಡಿದರೆ ಗುರುತಿಸುತ್ತೇನೆ. (ಸದರಿಯವರು ಈ ದಿನ ಗೈರುಹಾಜರಿದ್ದು ಅವರನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.) ವಶಪಡಿಸಿಕೊಂಡಿರು ವಸ್ತುಗಳ ಬಗ್ಗೆ ನನಗೆ ಸಂಪೂರ್ಣವಾಗಿ ನೆನಪಿದೆ.

PW-2
CW-4

(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ಕಾರಿ ಅಭಿಯೋಜಕರು ಕೋರಿರುತ್ತಾರೆ. ವಾದ ಕೇಳಿ ದಾಖಲೆ ಪರಿಶೀಲಿಸಿ ಅನುಮತಿ ಕೊಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**:

3. 6 ಎಲೆಕ್ಟಾನಿಕ್ ಡಿಟೋನೇಟರ್ ಸಹಿತ ವಶಪಡಿಸಿಕೊಂಡರು ಎಂದರೆ ನಿಜ.

**ಪಾಟೀ ಸವಾಲುಃ ಶ್ರೀ ಮತಿ ಕೆ ಎಸ್ ಯು ವಕೀಲರಿಂದ 1, 2 ಮತ್ತು 4 ನೇ ಆರೋಪಿತರ ಪರವಾಗಿ**:

4. ನಾನು ಮತ್ತು ಚಾಸಾ-5 ರವರು ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತೇವೆ ಎಂದರೆ ನಿಜ. ನನ್ನ ಕೆಲಸದ ಅವದಿ ಬೆಳಿಗ್ಗೆ 9-30 ರಿಂದ ಸಂಜೆ 5-30 ರ ವರಗೆ ಇರುತ್ತದೆ. ಬೆಳಿಗ್ಗೆ 9-30 ಕ್ಕೆ ಬಂದು ಪೀಲ್ಡ್ ವರ್ಕ್ ಗೆ ಹೋಗುತ್ತೇವೆ. ನಮಗೆ ಹಾಜರಾತಿಗೆ ಸಹಿ ಮಾಡುವುದು ಕಡ್ಡಾಯವಾಗಿರುತ್ತದೆ. ನಮ್ಮ ಕಚೇರಿಯಲ್ಲಿ ಚಲನ ವಲನ ರಿಜಿಸ್ಟರ್ ಇದೆಯೇ ಎಂದರೆ ನಮಗೆ ಟೂರ್ ಡೈರಿ ಇರುತ್ತದೆ. ನಿ.ಪಿ.- 5 ರಲ್ಲಿ ಎಷ್ಟು ಗಂಟೆಗೆ ಬಂದು ಹಾಜರಾಗಬೇಕು ಎಂದು ನಮೂದಾಗಿಲ್ಲ. ನಮ್ಮ ಮೇಲಾಧಿಕಾರಿಗಳು ಪಂಚರಾಗಿ ಸಹಕರಿಸಲು ಲಿಖಿತವಾಗಿ ದಾಖಲೆ ನೀಡಿಲ್ಲ, ಮೌಖಿಕವಾಗಿ ಆದೇಶ ಮಾಡಿರುತ್ತಾರೆ.

5. ಮಾನ್ವಿಯ ಆರ್ ಜಿ ಕ್ಯಾಂಪ್, ಸರ್ವೆ ನಂಬರ್ 338 ಯಾರಿಗೆ ಸಂಬಂದಿಸಿದ್ದು ಎಂದರೆ ರಾಮಕೃಷ್ಣ ತಂದೆ ಚಂದ್ರ ರಾವ್ ರವರಿಗೆ ಸಂಬಂದಿಸಿದ್ದು. ಅವರು ಸಹ ಸ್ಥಳಕ್ಕೆ ಬಂದಿದ್ದರು. ಸ್ಫೋಟಕ ವಸ್ತುಗಳ ಬಗ್ಗೆ ನಿಖರವಾದ ಅಬಿಪ್ರಾಯ ಹೇಳಲು ನನಗೆ ತರಬೇತಿ ಇರುವುದಿಲ್ಲ. ಬಾಂಬ್ ಸ್ಕ್ವಾಡ್ ರಾಯಚೂರಿನಿಂದ ಬಂದಿದ್ದರು. ಆ ಸಮಯದಲ್ಲಿ ಪೋಟೋ ತೆಗೆದರು. ಅಮಾನತ್ತು ಪಡಿಸುವ ಕಾಲಕ್ಕೆ ಪಂಚನಾಮಕ್ಕೆ ಮಾತ್ರ ಸಹಿ ಪಡೆದರು. ಅಮಾನತ್ತು ಮಾಡಿಕೊಂಡ ವಸ್ತುಗಳ ಮೇಲೆ ಸಹಿ ಮಾಡಿಸಿಕೊಂಡಿಲ್ಲ. ಮಾನ್ವಿ ಪೋಲೀಸ್ ಠಾಣೆ ಯಲ್ಲಿ ನಾನು ಪಂಚನಾಮೆ ಸಹಿ ಮಾಡಿದೆ ಎಂದರೆ ಸರಿಯಲ್ಲ. ವಶಪಡಿಸಿಕೊಂಡ ವಸ್ತುಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

PW-2
CW-4

ಮುಜಾಹಿದ್ದೀನ್ ಸಿದ್ದಕಿಯವರು ಸ್ಥಳ ದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನುವ ಶಪಡಿಸಿಕೊಂಡಿಲ್ಲ, ಮಹಜರ್ ಮಾಡಿಲ್ಲ ಎಂದರೆ ಸುಳುಳ. ಪೋಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ JNK ವಕೀಲರಿಂದ ನೇ 6 ರಿಂದ 8 ಆರೋಪಿತರ ಪರವಾಗಿಃ**-1, 2 ಮತ್ತು 4 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.